ಅಬಸ್ಟ್ರಾಕ್ಟ್.

ಇಸ್ತಿಹಾರ್ನಾಮೆ, ತಾರೀಖು 22ನೇ ಮೇ 1903.

ಮೂಲೂರು ತಾಲ್ಲೂಕು ತ್ಯಾಕಲ್ ಹೋಬಳಿಗೆ ಸೇರಿದ ಮಾಜಿನ್ನಲ್ಲಿ ನಮೂದಾಗುವ ಗ್ರಾಮಗಳ ಬಳಿ ಇರತಕ್ಕ ಬಂಡೆ

1. ತ್ಯಾಕಲ	4. ಕೊರಚನೂರು
2. ಕಾವಲಗಿರಿಯನಹಳ್ಳಿ	5. ಹುಣಸಕೋಟೆ
3. ಕೊಂಡರಾಜನಹಳ್ಳಿ	6. ವುಳ್ಳೀರಹಳ್ಳಿ

ಮೇಲೆ ಕಲ್ಲು ತೆಗೆಯಲು ಕೋಭಕೃತು ಸಂವತ್ಸರಕ್ಕೆ (1903–1904) ಅಂದರೆ 1903ನೇ ಜುಲೈ 1ನೇ ತಾರೀಖು ಲಾಗಾಯತು 1904ನೇ ಜೂನ್ ಆಖೈರು ವರಿಗೆ ಕಲ್ಲು ತೆಗಿಯುವದಕ್ಕೋಸ್ಕರ 1903ನೇ ಇಸವಿ ಜೂನ್ 30ನೇ ತಾರೀಖಿನಲ್ಲಿ ಮೂಲೂರು ತಾಲ್ಲೂಕು ಕಛೇರಿಯಲ್ಲಿ ಈ ಬಾಬನ್ನು ಹರಾಜು ಹಾಕಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1903ನೇ ಇಸವಿ ಜೂನ್ ತಾರೀಖು 4ನೇ ಮತ್ತು 22ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 260—261ನೇ ನಂಬರ್ ಪೇಜು ನೋಡತಕ್ಕದ್ದು.

ಮೂಲೂರು ತಾಲ್ಲೂಕು ನರಸಾಪುರದ ಹೋಬಳಿಗೆ ಸೇರಿದ ಕಾಯಂಗುತ್ತಾ ಗರುಡನಪಾಳ್ಯ ಗ್ರಾಮವು ಸರಕಾರಕ್ಕೆ ಬರಬೇಕಾದ ಗುತ್ತಾ ಬಾಕೀಗೋಸ್ಕರವಾಗಿ ಮೂಲೂರು ತಾಲ್ಲೂಕು ಆಮಿಲರವರ ಕಚೇರಿಯಲ್ಲಿ 1903ನೇ ಇಸವಿ ಜುಲೈ 10ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಶೀಲ್ ಬಗ್ಯೆ 1903ನೇ ಇಸವಿ ಜೂನ್ ತಾರೀಖು 4ನೇ ಮತ್ತು 22ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 260–261ನೇ ನಂಬರು ಪೇಜು ನೋಡತಕ್ಕದ್ದು.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

1902—03ನೇ ಸಾಲುಖೈರು ವರಿಗೆ ಸರಕಾರಕ್ಕೆ ಬರಬೇಕಾದ ಕಂದಾಯದ ಬಾಕೀಗಾಗಿ ಶಿವಮೊಗ್ಗ ತಾಲ್ಲೂಕು ಹೊಳೆಲೂರು ಹೋಬಳಿಯಲ್ಲಿರುವ ಬೆಳಲಕಟ್ಟೆ ಅಗ್ರಹಾರದ ಇನಾಂ ಜಮೀನು ಸ॥ 1903ನೇ ಇಸವಿ ಜುಲೈ 10ನೇ ತಾರೀಖಿನ ದಿವಸ ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ ಹರಾಜ್ ಹಾಕಿಸಲ್ಪಡುತ್ತೆ.

ಈ ವಿಷಯದಲ್ಲಿ ಹೆಚ್ಚಿಗೆ ತಪಶೀಲುಗಳ ಬಗ್ಯೆ 1903ನೇ ಇಸವಿ ಜೂನ್ ತಾರೀಖು 4ನೇ ಮತ್ತು 22ನೇ ನಂಬರ್ ಮೈಸೂರು ಗೆಜೆಟಿನ 2ನೇ ಭಾಗದ 262ನೇ ಪೇಜಿನಲ್ಲಿ ಛಾಯಿಪ್ಪಾಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸ॥ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 153.

ಮೃತಪಟ್ಟ ಶಿವಮೊಗ್ಗದಲ್ಲಿದ್ದ ಕೆ. ಸುಬ್ರಹ್ಮಣ್ಯಯ್ಯ ವುರಫ್ ಗುಂಡಪ್ಪ, ಲೇಟ್ ರಿಜಿಸ್ಟ್ರೇರ್ ಕ್ಲಾರ್ಕ್, ಶಿವಮೊಗ್ಗ ಡಿಸ್ಟ್ರಿಕ್ಟ್, ಇವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) 1ನೇ ಗಂಗಮ್ಮ ವುರಫ್ ಗುಂಡಮ್ಮ, 2ನೇ ಮಗ ಫಣಿಯಪ್ಪ ವುರಫ್ ಶಾಮಂಣ ಮೈನರ್, ಗಾರ್ಡಿಯರ್ 1ನೇ ಅರ್ಜಿದಾರ್ ಅಜಂಪುರ ವಾಸಿ, ಮೃತಪಟ್ಟ ಸದರೀ ಸುಬ್ರಹ್ಮಣ್ಯಯ್ಯನವರಿಗೆ 1ನೇ ಅರ್ಜಿದಾರಳು ಹೆಂಡತಿ 2ನೇ ಯವ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಅಜಂಪುರ ಸ್ಥಳದ ಅರ್ಜಿದಾರರು ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಕೆ. ಸುಬ್ರಹ್ಮಣ್ಯಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 892—0—0 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸ॥ 1901ನೇ ಇಸವಿ VIIನೇ ನಂಬರ್ ರೆಗ್ಯುಲೇರ್ಷ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಗಂಗಮ್ಮ, 2ನೇ ಫಣಿಯಪ್ಪನವರ ಅರ್ಜಿಯನ್ನು ಸ॥ 1903ನೇ ಇಸವಿ ಜುಲೈ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟವರ್ಕೆ. ಸುಬ್ರಹ್ಮಣ್ಯಯ್ಯನವರ ಆಸ್ತಿಗ ಹಕ್ಕುದಾರರಾದ ವಿಸಿಪಟ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯುಪಡಿಸಿ ಇಧೆ.

ಸ॥ 1903ನೇ ಇಸವಿ ಜೂನ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಸಿ. ಶೇಷಯ್ಯಂಗಾರ್,
ಶಿರಸ್ತೆದಾರ್.

ಚಿಕ್ಕಮುಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಿಂದ.

ಸ॥ 1902–1903ನೇ ಇಸವಿ ಮಿ॥ ಅರ್ಜೀ ನಂಬರ್ 305.

ಮೃತಪಟ್ಟ ನಾಗಾಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಕಡೂರು ತಾಲ್ಲೂಕು ಸಖ್ಯಾಯಪಟ್ಟಣದಲ್ಲಿರುವ ಸುಬ್ಬಾಯಭಟ್ಟ ಯಾನೆ ಲಿಂಗಂಭೈಯ್ಯನು, ಮೃತಪಟ್ಟ ನಾಗಾಭಟ್ಟರಿಗೆ ದತ್ತು ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಸದರಿ ಸಖ್ಯಾಯಪಟ್ಟಣದಲ್ಲಿ ವಾಸಸ್ಥರಾಗಿ ಮೃತಪಟ್ಟ ನಾಗಾಭಟ್ಟರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ॥ 1901ನೇ ಇಸವಿ VIIನೇ ಆಕ್ಟ್ ವೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಾಯಭಟ್ಟ ಯಾನೆ ಲಿಂಗಂಭೈಯ್ಯನ ಅರ್ಜಿಯನ್ನು ಸ॥ 1903ನೇ ಇಸವಿ ಜುಲೈ ತಿಂಗಳು 23ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಾಭಟ್ಟರವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ॥ 1903ನೇ ಇಸವಿ ಏಪ್ರೆಲ್ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ॥ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 306.

ಮೃತಪಟ್ಟ ಅಬ್ದುಲ್‌ರಹಿಮ್ಮಾರ್ಖಾ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿಕ್ಕಮಗಳೂರು ಕಾಫಿಪ್ಲಾಂಟರ್ ಭಾಬೂಮಿಯ್ಯಾ ಸಾಬರ ಮಗಳು ಆಷಾಬಿಯು, ಮೃತಪಟ್ಟ ಸದರಿ ಅಬ್ದುಲ್‌ರಹಿಮ್ಮಾರ್ಖಾ ಯವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರಿ ಚಿಕ್ಕಮುಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಅಬ್ದುಲ್‌ರಹಿಮ್ಮಾರ್ಖಾ ಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟ್ ವೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಆಷಾಬಿಯವರ ಅರ್ಜಿಯನ್ನು ಸ॥ 1903ನೇ ಇಸವಿ ಜುಲೈ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ದುಲ್‌ರಹಿಮ್ಮಾರ್ಖಾ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ॥ 1903ನೇ ಇಸವಿ ಏಪ್ರೆಲ್ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಪರಮೇಶ್ವರ ಅಯ್ಯರ್,
ಸಬಾರ್ಡಿನೇಟ್ ಜಡ್ಜ್.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ನೋಟಿಸ್.

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ನಾಲ್ಕನೇ ಡಿವೀಜ್ ತಾರಾಮಂಡಲ್‌ಪೇಟೆ ನಾಲ್ಕು ಭಾವಿ ಬಳಿಯಣ ಖಾಲಿ ಜಮೀನಲ್ಲಿ ಛಂಡಿಗಳು ವಗೈರೆ ನಿಲ್ಲುವವೆರ ಕಡೆಯಿಂದ, ಜಮೀನ್ ಬಾಡಿಗೆಯನ್ನು 1903ನೇ ಇಸವಿ ಜುಲೈ ಗುರ್ರೆ ಲಾಗಾಯತು 1904ನೇ ಇಸವಿ ಜೂ॥ ಆಖೈರವರೆಗೆ ರೋಜೀನಾ ಇದರಡಿ ನಮೂದಿಸಿರುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸ್ಯೆ ಮಾಡಿರುವವರಿಗೆ 1903ನೇ ಜೂ॥ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು:—

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್:—

		ರೂ. ಆ. ಪೈ.
1.	ಕಟ್ಟಿಗೆ ಮತ್ತು ಹುಲ್ಲುಛಂಡಿ 1ಕ್ಕೆ	0—2—0
2.	ಕಟ್ಟಿಗೆ ಹೊರೆ 1ಕ್ಕೆ	0—0—1
3.	ಹುಲ್ಲುಹೊರೆ 1ಕ್ಕೆ	0—0—2
4.	ತರಕಾರಿ ಅಂಗಡಿ ಜಾಗಾಕ್ಕೆ	0—0—2
5.	ಕುಂಬಾರ್ರ ಸಾಮಾನ ಮಂಕ್ರಿ 1ಕ್ಕೆ	0—0—2
6.	ಮೀಟ್ ವಗೈರೆ ಅಂಗಡಿ 1ಕ್ಕೆ	0—0—2

3. ದರಖಾಸ್ತುಗಳ ಮೇಲ್‌ಭಾಗದಲ್ಲಿ "ತಾರಾಮಂಡ್ಲಪೇಟೆ ನಾಲ್ಕು ಭಾವಿ ಬಳಿಯಣ ಖಾಲಿ ಜಮೀನಿನಲ್ಲಿ ಕಟ್ಟಿಗೆ ಮತ್ತು ಹುಲ್ಲುಛಂಡಿ ವಗೈರೆ ಇಟ್ಟುಕೊಂಡು ಮೂರುವರಿಂದ ಜಮೀನ್ ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬ ಬಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ಣಿಸಿ ನೋಟುಗಳಾಗಲಿ 50 ರೂಪಾಯಿನ ತೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.